ಆ) ಬಂದಿದ್ದಲ್ಲಿ ಆ ಹಣದ ಮೊತ್ತವೆಷ್ಟು?

ಇ) ಸಾಲ ಮನ್ನಾ ಯೋಜನೆಯಡಿಯಲ್ಲಿ ಒಟ್ಟು ಎಷ್ಟು ಜನ ರೈತರಿಗೆ ಅನುಕೂಲವಾಗುತ್ತದೆ?

ಈ) ಸಾಲ ಮನ್ನಾ ಮಾಡಿದರೆ ಅದಕ್ಕೆ ಒಟ್ಟು ತಗಲುವ ಹಣದ ಮೊತ್ತವೆಷ್ಟು?

ಶ್ರೀ ಎಸ್.ಆರ್. ಮೋರೆ (ಸಹಕಾರ ಸಚಿವರು):-

ಆ) ಬಂದಿದೆ.

ಆ) ರೂ. 46.33 ಕೋಟಿ.

ಇ) 4,79,102 ರೈತರು.

ಈ) ರೂ. 134-05 ಕೋಟಿ.

ಬಸವಕಲ್ಯಾಣದಲ್ಲಿ ಆರ್.ಟಿ.ಓ. ಕಛೇರಿ ಪ್ರಾರಂಭ

442(636). ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿ ಪ್ರಸ್ತುತ ವರ್ಷ ಆರ್.ಟಿ.ಓ. ಕಛೇರಿ ತೆರೆಯುವ ಯೋಚನೆ ಸರ್ಕಾರಕ್ಕಿದೆಯೇ?

ಬ) ಇದ್ದರೆ ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಆಜೀಜ್ ಸೇಠ್ (ಸಾರಿಗೆ ಸಚಿವರು):-

ಅ) ಇಲ್ಲ.

ಬ) ಮೇಲಿನ (ಅ) ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ.

ಬಸವಕಲ್ಯಾಣದ ಖಂಡವಾಳು ಗ್ರಾಮದ ಬಸ್ ಸ್ಟೇಜ್ ಬದಲಾಯಿಸಿದ ಬಗ್ಗೆ

443(637). ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಬಸವಕಲ್ಯಾಣ ತಾಲ್ಲೂಕಿನ ಖಂಡವಾಳು ಗ್ರಾಮದ ಬಸ್ ಸ್ಟೇಜನ್ನು ಬದಲಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಬಸ್ ಸ್ಟೇಜನ್ನು ಮೊದಲಿನ ಜಾಗದಲ್ಲಿ ಮುಂದುವರಿಸಿ ಜನಗಳ ಅನುಕೂಲಕ್ಕೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಆಜೀಜ್ ಸೇಠ್ (ಸಾರಿಗೆ ಸಚಿವರು):-

ಅ) ಪ್ರಸ್ತುತ ಖಂಡವಾಳು ಗ್ರಾಮದಲ್ಲಿ ಬಸ್ ಸ್ಟೇಜ್ ಇರುವುದಿಲ್ಲ. ಗೌರ್ 'ಬ'ಯಲ್ಲಿ ಸ್ಟೇಜ್ ಪಾಯಿಂಟ್ ಇರುತ್ತದೆ.

ಆ) ಸ್ಟೇಜ್ ಪಾಯಿಂಟ್ ಸ್ಥಳವನ್ನು ಬದಲಾಯಿಸಲಾಗಿಲ್ಲ. ಆದಾಗ್ಯೂ ಖಂಡವಾಳು ತಿರುವಿಗೆ ಸ್ಟೇಜ್ ಪಾಯಿಂಟನ್ನು ನಿರ್ಧರಿಸುವ ಅವಶ್ಯಕತೆ ಇದೆ.